ಬೆಂಗಳೂರಿನ ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಅನುಮತಿ

೩೮೯. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಂಗಳೂರು ನಗರದಲ್ಲಿ ಒಟ್ಟು ಎಷ್ಟು ಶಿಕ್ಷಣ ಸಂಸ್ಥೆಗಳಿಂದ ಇಂಗ್ಲೀಷ್ ಮೀಡಿಯಂ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ತೆರೆಯಲು ಸರಕಾರಕ್ಕೆ ಅರ್ಜಿಗಳು ಬಂದಿವೆ (ಎರಡನ್ನೂ ಬೇರೆ ಬೇರೆಯಾಗಿ ನೀಡುವುದು);

ಆ) ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ಪ್ರಾರಂಭಿಸಲು ಅರ್ಹ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡಲು ಸರಕಾರಕ್ಕೆ ಇರುವ ತೊಂದರೆಗಳೇನು, ಹಾಗೂ ಇಂಗ್ಲೀಷ್ ಮಿಡಿಯಂ ಶಾಲೆಗಳಿಗೆ ಅನುಮತಿ ನೀಡಲು ಸರಕಾರವು ಏನಾದರೂ ಮಾರ್ಗಸೂಚಿಗಳನ್ನು ಹಾಕಿ ಕೊಂಡಿದೆಯೇ?

ಇ) ಅರ್ಹವಾದ ಎಲ್ಲಾ ರೀತಿಯ ಷರತ್ತುಗಳನ್ನೂ ಪೂರೈಸುವ ಹಾಗೂ ಕನ್ನಡ ಮಾಧ್ಯಮ ಶಾಲೆಗಳನ್ನು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಲು ಸರಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಪ್ರಾಥಮಿಕ ಶಾಲೆಗಳು — ೧೭೭
ಪ್ರೌಢ ಶಾಲೆಗಳು — ೧೪೪

ಆ) ಪ್ರಾಥಮಿಕ ಶಾಲೆಗಳ ಅನುದಾನ ಸಂಹಿತೆಯಲ್ಲಿ ಸೂಚಿಸಿರುವಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಅನುದಾನ ಸಂಹಿತೆಯ ಪ್ರಕಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ನಗರದ ಬನಶಂಕರಿ ಒಂದು, ಎರಡು ಮತ್ತು ಮೂರನೆಯ ಘಟ್ಟದಲ್ಲಿ ಇರತಕ್ಕ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ.

೩೦೮. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಶಿಕ್ಷಣ ಯುವಜನ ಸೇವೆ, ಕ್ರೀಡೆ ಕನ್ನಡ, ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬೆಂಗಳೂರು ನಗರದ ಬನಶಂಕರಿ ಒಂದನೇ ಘಟ್ಟ, ಎರಡನೇ ಘಟ್ಟ, ಮೂರನೇ ಘಟ್ಟಗಳಲ್ಲಿ ಇರತಕ್ಕ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು. ಅವು ಯಾವುವು.

ಆ) ಮೇಲ್ಕಂಡ ಬಡಾವಣೆಗಳಲ್ಲಿ ಅನುಮತಿ ಪಡೆದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು ಅವು ಯಾವುವು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು).—

ಅ) ಸರಕಾರಿ ಪ್ರಾಥಮಿಕ ಶಾಲೆಗಳು — ೬
ಸರಕಾರಿ ಪ್ರೌಢ ಶಾಲೆಗಳು — ಇಲ್ಲ
ವಿವರಗಳಿಗೆ ಅನುಬಂಧ ನೋಡುವುದು.

ಆ) ಪ್ರಾಥಮಿಕ ಶಾಲೆಗಳು — ೨೦
ಪ್ರೌಢ ಶಾಲೆಗಳು — ೫
ವಿವರಗಳಿಗೆ ಅನುಬಂಧ ನೋಡುವುದು.